**<u>ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ</u>**

**<u>ನ್ಯಾಯಾಲಯ, ಸವಣೂರು.</u>**

ಸಿ.ಸಿ ಸಂಖ್ಯೆಃ 264/2023

ಪಿಡಬ್ಲ್ಯೂಃ 03 ಸಿಡಬ್ಲ್ಯೂ ಃ 02

ದಿನಾಂಕಃ 05-08-2025

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | - | ಮಹೇಶ ಜಡಿ |
| ತಂದೆ ಹೆಸರು | - | ಶಿವಪ್ಪ ಜಡಿ |
| ವಯಸ್ಸು | - | 27 ವರ್ಷ |
| ಉದ್ಯೋಗ | - | ವ್ಯವಸಾಯ |
| ವಾಸ ಸ್ಥಳ | - | ಸವಣೂರ |

**<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದ.</u>**

ಚಾಸಾ- 3 ರವರ ಪರಿಚಯ ನನಗೆ ಇಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದು ಅದು ಅಪರಾಧ ಜಾಗೆಯ ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ- 1 ಎಂದು ಗುರುತಿಸಿದ್ದು ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ- 1 ಎಂದು ಸಾಕ್ಷಿಯ ಸಹಿಯನ್ನು 1(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಎರಡು ಭಾವ ಚಿತ್ರಗಳನ್ನು ತೋರಿಸಿದ್ದು ಅದರಲ್ಲಿ ತಾನು ಇರುವುದನ್ನು ನಿಖರಪಡಿಸಿಕೊಂಡು ಅವುಗಳನ್ನು ಈಗಾಗಲೇ ನಿಪಿ- 2 ಮತ್ತು 3 ಎಂದು ಗುರುತಿಸಲಾಗಿದೆ. ಪೋಲಿಸರು ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ. ಭಾವ ಚಿತ್ರಗಳನ್ನು ಯಾವ ಉದ್ದೇಶಕ್ಕಾಗಿ ತೆಗೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಸಹಿಗಳನ್ನು ನಾನು ಹೋಲಕ್ಕೆ ಹೋಗಬೇಕಾದರೆ ಪೋಲಿಸರು ಕರೆದು ಪಡೆದಿರುತ್ತಾರೆ. ಪೋಲಿಸರು ಸಹಿ ಮಾಡು ಎಂದಿದ್ದಕ್ಕೆ ಸಹಿ ಮಾಡಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಸ.ಸ.ಅ.ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದ.</u>**

ಈ ದಿವಸ ದಿಃ 19-07-2021 ರಂದು ------------ ಸಾರ್ವಜನಿಕರಿಗೆ ಮೋಸ ಮಾಡುತ್ತಿರುವುದು ನಿಜ ಇರುತ್ತದೆ. ಈ ಮೇಲೆ ಓದಿ ಹೇಳಿದ ರೀತಿ ನೀವು ಪೋಲಿಸರ ಮುಂದೆ

ಹೇಳಿಕೆ ನೀಡಿರುತ್ತೀರಿ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ- 5 ಎಂದು ಗುರುತಿಸಲಾಯಿತು.

ದಿಃ 20-07-2021 ರಂದು ಮುಂಜಾನೆ 7.30 ರಿಂದ 8.30 ವರೆಗೆ ನಿಮ್ಮ ಮತ್ತು ಚಾಸಾ- 3 ರವರ ಸಮಕ್ಷಮ ಬಸವರಾಜ ಚಲವಾದಿ ರವರು ತೋರಿಸಿದ ಜಾಗೆಯಲ್ಲಿ ನಿಪಿ- 1 ರಂತೆ ಪಂಚನಾಮೆಯನ್ನು ಮಾಡಿ ನಿಪಿ- 2 ಮತ್ತು 3 ನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಿಮಗೆ ಎಲ್ಲಾ ವಿಷಯ ತಿಳಿದ್ದಿದ್ದರು ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರು ಇಲ್ಲ ಎಂದು ಹೇಳಿರುತ್ತಾರೆ.</u>**

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.